ಅ) 42

ಆ) ಬಾಗಲಕೋಟೆ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆವತಿಯಿಂದ ಕೆರೆಗಳ ಮೂಲಕ ನೀರಾವರಿ ಪ್ರದೇಶದ ವಿಸ್ತೀರ್ಣ ಈ ಕೆಳಗಿನಂತೆ ಇರುತ್ತವೆ.

ಕ್ರ. ಸಂ.	ತಾಲ್ಲೂಕು	ಕೆರೆಗಳ ಸಂಖ್ಯೆ	ಅಚ್ಚುಕಟ್ಟು ಕ್ಷೇತ್ರ (ಹೆ.ಗಳಲ್ಲಿ)
1.	ಬಾಲಕೋಟೆ	4	1759
2.	ಬಾದಾಮಿ	13	2475
3.	ಹುನುಗುಂದ	9	4279
4.	ಮುಧೋಳ	4	890
5.	ಜಮಖಂಡಿ	9	1081
6.	ಬೀಳಗಿ	3	305
	ಒಟ್ಟು	**42**	**10789**

ಇ) ರೈತ ಕಾಯಕ ಕೆರೆ ಯೋಜನೆಯಡಿ 6 ಕೆರೆಗಳಲ್ಲಿ, ಬರಪರಿಹಾರ ಕಾಮಗಾರಿ ಯೋಜನೆಯಡಿ 20 ಕೆರೆಗಳಲ್ಲಿ ಮತ್ತು ಜಲ ಸಂವರ್ಧನೆ ಯೋಜನಾ ಸಂಘದ ಅಡಿ 16 ಕೆರೆಗಳಲ್ಲಿ ಭಾಗಶ: ಹೂಳನ್ನು ತೆಗೆಯಲಾಗಿದೆ.

ಈ) ಅನುದಾನದ ಲಭ್ಯತೆ ಮೇಲೆ ಪರಿಶೀಲಿಸಲಾಗುವುದು.

2280(2060) ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಲಕೋಟೆ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂಗಮ ಕ್ರಾಸ್‌ನಿಂದ ಆಲಮಟ್ಟಿಯವರೆಗೆ ಇರುವ ಕೃಷ್ಣಾ ಭಾಗ್ಯ ಜಲ ನಿಗಮದ ವ್ಯಾಪ್ತಿಯ ರಸ್ತೆಯು ತೀರಾ ಅವ್ಯವಸ್ಥಿತವಾಗಿದ್ದು, ಅದನ್ನು ದುರಸ್ತಿಗೊಳಿಸಲು ಸರ್ಕಾರದ ವಿಳಂಬ ನೀತಿಗೆ ಕಾರಣಗಳೇನು;

ಆ) ಸದರಿ ರಸ್ತೆಯನ್ನು ಶೀಘ್ರಗತಿಯಲ್ಲಿ ದುರಸ್ತಿಗೊಳಿಸಿ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):-

ಅ&ಆ)ಸದರಿ ರಸ್ತೆ ಅವ್ಯವಸ್ಥಿತವಾಗಿದ್ದು, ತುರ್ತು ದುರಸ್ತಿಗಾಗಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಡಿಯಲ್ಲಿ ಹಣ ಮಂಜೂರಾತಿ ಮಾಡಲಾಗಿದ್ದು, ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

2281(3017) ಶ್ರೀ ಚಿಕ್ಕನಗೌಡ ಸಿದ್ಧನಗೌಡ ಈಶ್ವರಗೌಡ (ಕಲಘಟಗಿ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಲಘಟಗಿ ತಾಲ್ಲೂಕಿನಲ್ಲಿ ಬಾಂದಾರ ಹಾಗೂ ಏತ ನೀರಾವರಿ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆಯೇ;

ಆ) ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ;